**ಪಲ್ಲವಿ ಆಕುರಾತಿ, ಭಾ.ಆ.ಸೇ**
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

GOVERNMENT OF KARNATAKA

ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ
3ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು-560001
✆ : 080-22867381/82/83
ಇ-ಮೇಲ್ : icps.kar@gmail.com

ಅ.ಸ.ಪತ್ರ ಸಂಖ್ಯೆ:ಮರನಿ/ಮರ/ವಿ.ಅವಘಡ/71/2021-22 ದಿನಾಂಕ: 04.10.2021

ಮಾನ್ಯ ಶ್ರೀ ಪಿ ರಾಜೇಂದ್ರ ಚೋಳನ್ ರವರೆ,

ವಿಷಯ : ವಿದ್ಯುತ್ ಅವಘಡಗಳಿಂದ ಮಕ್ಕಳು ಅನಾಹುತಗಳಿಗೆ ಒಳಗಾಗುತ್ತಿರುವ ಬಗ್ಗೆ.
ಉಲ್ಲೇಖ : ಶ್ರೀ ತಿಪ್ಪೇಸ್ವಾಮಿ ಕೆ.ಟಿ ಸದಸ್ಯರು ಪರಿಷತ್ ಮತ್ತು ಕಾರ್ಯಕಾರಿ ಸಮಿತಿ, ರಾಷ್ಟ್ರೀಯ ಯುವಜನ ಅಭಿವೃದ್ಧಿ ನಿಧಿ ಮತ್ತು ಕ್ರೀಡಾ ಸಚಿವಾಲಯ ಭಾರತ ಸರ್ಕಾರ ಇವರ ಪತ್ರ ದಿನಾಂಕ:15.08.2021

* * * * * *

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಜಿಲ್ಲೆ, ಕೋರಾ ಹೋಬಳಿಯ ಕರಿಕೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಧ್ವಜಸ್ತಂಭ ನಿಲ್ಲಿಸುವ ಸಂದರ್ಭದಲ್ಲಿ ವಿದ್ಯುತ್ ಸ್ಪರ್ಶಿಸಿ ಒಂದು ಮಗು ಸಾವನ್ನಪ್ಪಿದ್ದು, ಎರಡು ಮಕ್ಕಳು ಗಾಯಗೊಂಡಿರುವುದಾಗಿ ಹಾಗೂ ಇದೇ ರೀತಿ 2019ರಲ್ಲಿ ಕೊಪ್ಪಳ ಜಿಲ್ಲೆಯಲ್ಲೂ ಸಹಾ ಮಕ್ಕಳು ಸಾವನ್ನಪ್ಪಿರುವುದರ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಮುಂದುವರೆದು ಶಾಲಾ ಆವರಣದಲ್ಲೇ ಟ್ರಾನ್ಸ್‌ಫಾರ್ಮರ್ ಅಳವಡಿಸಿರುವುದು ಸೇರಿದಂತೆ ವಿದ್ಯುತ್ ಸಂಬಂಧಿತ ಹತ್ತಾರು ಸಮಸ್ಯೆಗಳನ್ನು ಬಗೆಹರಿಸುವಂತೆ ಮಕ್ಕಳು ಮತ್ತು ಶಿಕ್ಷಕರು ಹಲವಾರು ವರ್ಷಗಳಿಂದ ಮಕ್ಕಳ ಗ್ರಾಮ ಸಭೆಗಳಲ್ಲಿ ಕೋರುವುದನ್ನು ಗಮನಿಸಿರುವುದಲ್ಲದೆ, **ಜಿಲ್ಲೆಯ ಸುಮಾರು 508 ಶಾಲೆಗಳಲ್ಲಿ ಈ ರೀತಿಯ ಸಮಸ್ಯೆ ಇರುವ ಬಗ್ಗೆ ಶಿಕ್ಷಣ ಇಲಾಖೆಯಿಂದ ವರದಿ ನೀಡಿದ್ದರೂ ಸಹಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಅಮಾಯಕ ಮಕ್ಕಳು ಜೀವ ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗಿರುವುದಾಗಿ ವರದಿಸಲಾಗಿದೆ.** (ಪತ್ರ ಲಗತ್ತಿಸಿದೆ)

ತುಮಕೂರು ಜಿಲ್ಲೆಯಲ್ಲದೆ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಸಹಾ ವಿದ್ಯುತ್ ಅವಘಡಗಳಿಂದ ಮಕ್ಕಳು ತೊಂದರೆಗೀಡಾಗುತ್ತಿರುವುದನ್ನು ಅಂದಾಜಿಸಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ,

1. **ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳ ಆವರಣದಲ್ಲಿ ವಿದ್ಯುತ್ ವ್ಯವಸ್ಥೆ ಕಲ್ಪಿಸುವಾಗ ಸುರಕ್ಷತಾ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ರಾಜ್ಯವ್ಯಾಪ್ತಿ ಅವಶ್ಯ ಮಾರ್ಗಸೂಚಿ/ನಿರ್ದೇಶನಗಳನ್ನು ಹೊರಡಿಸಲು**

2. **ಎಲ್ಲಾ ಶಾಲಾ ಕಾಲೇಜು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಇತ್ಯಾದಿ ಇಲಾಖೆಗಳಡಿ ನಡೆಸಲ್ಪಡುವ ಎಲ್ಲಾ ಮಕ್ಕಳ ಸಂಸ್ಥೆಗಳಲ್ಲಿ ವಿದ್ಯುತ್ ಸುರಕ್ಷತಾ ಕ್ರಮಗಳು ಅನುಷ್ಠಾನವಾಗಿರುವ ಬಗ್ಗೆ ತಮ್ಮ ಇಲಾಖೆಯ ಜಿಲ್ಲಾ ಅಧಿಕಾರಿಯಿಂದ ದೃಢೀಕರಣಗಳನ್ನು ಪಡೆದು** ಈ ಇಲಾಖೆಗೆ ಅನುಪಾಲನೆಯಾದ ಬಗ್ಗೆ ಮಾಹಿತಿ ಒದಗಿಸಲು ಕೋರಿದೆ.

ಮೇಲೆ ತಿಳಿಸಿದ ಪ್ರಕರಣಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಅಗತ್ಯ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಈ ಬಗ್ಗೆ ಮೇಲುಸ್ತುವಾರಿ ಕೈಗೊಳ್ಳಲು ಈ ಮೂಲಕ ಮತ್ತೊಮ್ಮೆ ಕೋರಿದೆ.

ತಮ್ಮ ವಿಶ್ವಾಸಿ,

04.10.2021

**ಗೆ,**
**ಶ್ರೀ ಪಿ ರಾಜೇಂದ್ರ ಚೋಳನ್, ಭಾ.ಆ.ಸೇ.**
**ವ್ಯವಸ್ಥಾಪಕ ನಿರ್ದೇಶಕರು,**
ಬೆ.ವಿ.ಕಂ, ನಿಗಮ ಕಾರ್ಯಾಲಯ,
ಕೆ.ಆರ್.ವೃತ್ತ, ಬೆಂಗಳೂರು-560001.

**ಪ್ರತಿಯನ್ನು:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ
2. ತಿಪ್ಪೇಸ್ವಾಮಿ.ಕೆ.ಟಿ ಸದಸ್ಯರು, ಪರಿಷತ್ ಮತ್ತು ಕಾರ್ಯಕಾರಿ ಸಮಿತಿ, ರಾಷ್ಟ್ರೀಯ ಯುವಜನ ಅಭಿವೃದ್ಧಿ ನಿಧಿ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಕಳೆಂಬೆಳ್ಳೆ, ಸಿರಾ ತಾ॥, ತುಮಕೂರು ಜಿಲ್ಲೆ-572 125